ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ...

# ಆರ್‌ಸಿಯು ಧ್ವನಿ

R.C.U DHWANI

E-mail: dhwani@rcub.ac.in

ಏಪ್ರೀಲ್ 2022 | ಸಂಪುಟ: 5 | ಸಂಚಿಕೆ 04 | ಪುಟಗಳು: 2 | ಖಾಸಗಿ ಪ್ರಚಾರಕ್ಕಾಗಿ ಮಾತ್ರ.....

| ವಿಜೃಂಭಣೆಯ ಆರ್‌ಸಿಯು 9ನೇ ಘಟಿಕೋತ್ಸವ | ಘನ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಉಪಸ್ಥಿತಿ |

# ಜ್ಞಾನದ ರತ್ನಗಳಿಗೆ ಚಿನ್ನದ ಸಂಭ್ರಮ

**ಸುವರ್ಣ ವಿಧಾನಸೌಧ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 9 ಘಟಿಕೋತ್ಸವವು ಕರುನಾಡಿನ ಶಕ್ತಿಕೇಂದ್ರ ಸುವರ್ಣ ವಿಧಾನಸೌಧದಲ್ಲಿ ಬುಧವಾರ (9 ಮಾರ್ಚ್ 2022)ರಂದು ಅತ್ಯಂತ ಅದ್ದೂರಿಯಾಗಿ ಜರುಗಿತು.

ಘಟಿಕೋತ್ಸವದಲ್ಲಿ 35,484 ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ, 2739 ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಪದವಿ, 188 ವಿದ್ಯಾರ್ಥಿಗಳಿಗೆ ಪಿಜಿ ಡಿಪ್ಲೊಮಾ ಪದವಿ ಮತ್ತು 86 ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಯಿತು. ಕಲಾ, ವಾಣಿಜ್ಯ, ಶಿಕ್ಷಣ ಮತ್ತು ವಿಜ್ಞಾನ ವಿಷಯದಲ್ಲಿ 86 ಜನ ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿಯನ್ನು ಪ್ರದಾನ ಮಾಡಲಾಯಿತು.

ಬಾಗಲಕೋಟೆಯ ಬಸವೇಶ್ವರ ಕಲಾ ಕಾಲೇಜಿನ ವಿದ್ಯಾರ್ಥಿನಿ ಸೌಮ್ಯ ಕುಂಬಾರ ಅವರಿಗೆ ಎರಡು ಸುವರ್ಣ ಪದಕ, ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಶ್ವೇತಾ ಗುಲನ್ನವರ, ಬಾಗಲಕೋಟೆಯ ಬಿ.ವಿ.ವಿ ಮ್ಯಾನೆಜ್‌ಮೆಂಟ್ ಸ್ಟಡಿಸ್ ವಿದ್ಯಾರ್ಥಿನಿ ಸಪ್ನಾ ಕಜೂರ, ನಿಪ್ಪಾಣಿಯ ಕೆ.ಎಲ್.ಇ.ಎಸ್ ಜಿ.ಐ ಬಾಗೇವಾಡಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿ ಜ್ಯೋತಿ ಅರುಣ ಚಾವನ ಅವರಿಗೆ ಸ್ನಾತಕೋತ್ತರ ವಿಭಾಗದಲ್ಲಿ ತಲಾ ಒಂದು ಸುವರ್ಣ ಪದಕ ನೀಡಲಾಯಿತು.

ಜಮಖಂಡಿಯ ತುಂಗಳ ಸ್ಕೂಲ್ ಆಪ್ ಬೆಸಿಕ್ ಆಂಡ್ ಅಪ್ಲೈಡ್ ಸೈನ್ಸ್ ವಿದ್ಯಾರ್ಥಿನಿ ಸಾವಿತ್ರಿ ಹಿರೇಮಠ ಅವರಿಗೆ ಎರಡು, ಬೆಳಗಾವಿಯ ಕೆಎಲ್ಎಸ್ ಗೋಗ–ಟೆ ಕಾಲೇಜ್ ಆಫ್ ಕಾಮರ್ಸ್‌ನ ವಿದ್ಯಾರ್ಥಿನಿ ಅಕ್ಷತಾ ಭಟ್, ಎಸ್.ಸಿ.ಪಿ ಕಲಾ ಮತ್ತು ಡಿ.ಡಿ.ಎಸ್ ಕಾಮರ್ಸ್ ಕಾಲೇಜ್‌ನ ವಿದ್ಯಾರ್ಥಿನಿ ಗಾಯತ್ರಿ ಬಾಗೇವಾಡಿ, ಗೋಕಾಕನ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್ ವಿದ್ಯಾರ್ಥಿನಿ ಸವಿತಾ ಪರಕನಟ್ಟಿ, ಸವದತ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸುರೇಶ ಮಲಕಪ್ಪ ಬಿದರಿ ಅವರಿಗೆ ಸ್ನಾತಕ ಕಲಾ ವಿಭಾಗದ ವಿಷಯವಾರು ಸುವರ್ಣ ಪದಕ ಪಡೆದುಕೊಂಡರು. ಒಟ್ಟು ಹತ್ತು ಸುವರ್ಣ ಪದಕಗಳನ್ನು ಒಂಬತ್ತು ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಯಿತು.

ಪದ್ಮಶ್ರೀ ಪುರಸ್ಕೃತ ಡಾ. ಹೆಚ್. ಸುದರ್ಶನ ಬಲ್ಲಾಳ ಅವರಿಗೆ ವೈದ್ಯಕೀಯ ಕ್ಷೇತ್ರದಲ್ಲಿ "ಡಾಕ್ಟರ್ ಆಫ್ ಸೈನ್ಸ್", ವಾದಿರಾಜ ಬಿ.ದೇಶಪಾಂಡೆ ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿ "ಡಾಕ್ಟರ್ ಆಫ್ ಲೆಟರ್ಸ್" ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪಂಡಿತ್ ರಾಜೀವ ತಾರಾನಾಥ ಇವರಿಗೆ ಭಾರತೀಯ ಸಂಗೀತ ಕ್ಷೇತ್ರದಲ್ಲಿ "ಡಾಕ್ಟರ್ ಆಫ್ ಲೆಟರ್ಸ್" ಗೌರವ ಡಾಕ್ಟರೇಟ್ ಪದವಿಯನ್ನು ಇದೇ ಸಂದರ್ಭದಲ್ಲಿ ಈ ಮೂವರಿಗೆ ನೀಡಲಾಯಿತು.




ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದ ಸಮಾರಂಭದಲ್ಲಿ ಘನ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನವನ್ನು ಅನುಮೋದಿಸಿದರು. ಕುಲಪತಿ ಪ್ರೊ. ಎಂ. ರಾಮಚಂದ್ರಗೌಡ, ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ, ಮೌಲ್ಯಮಾಪನ ಕುಲಸಚಿವ ಪ್ರೊ. ವೀರನಗೌಡ ಪಾಟೀಲ ಚಿತ್ರದಲ್ಲಿದ್ದಾರೆ.

## 'ಏಕ ಭಾರತ–ಶ್ರೇಷ್ಠ ಭಾರತ ನಿರ್ಮಿಸೋಣ'

**ಸುವರ್ಣ ವಿಧಾನಸೌಧ:** ಯುವ ಸಮುದಾಯವು ಸಂವಿಧಾನಾತ್ಮಕ ಕರ್ತವ್ಯಗಳನ್ನು ನಿಭಾಯಿಸಿ 'ಏಕ ಭಾರತ ಶ್ರೇಷ್ಠ ಭಾರತ' ನಿರ್ಮಿಸುವ ಗುರಿಯನ್ನು ಹೊಂದಬೇಕಿದೆ. ಭಾರತಕ್ಕೆ ವಿಶ್ವಗುರುವಿನ ಗೌರವ ಮತ್ತೆ ದೊರಕಿಸಿಕೊಡುವ ನಿಟ್ಟಿನಲ್ಲಿ ನಾವೆಲ್ಲರೂ ದೃಢ ಸಂಕಲ್ಪ ಹೊಂದಬೇಕು ಎಂದು ಘನ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕರೆ ನೀಡಿದರು.

ಸುವರ್ಣ ವಿಧಾನಸೌಧ ಸೆಂಟ್ರಲ್ ಸಭಾಂಗಣದಲ್ಲಿ ಬುಧವಾರ (9 ಮಾರ್ಚ್ 2022) ನಡೆದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜ್ಞಾನ ಗಳಿಸುವುದು ಶಿಕ್ಷಣದ ಮೂಲ ಉದ್ದೇಶವಾಗಿದೆ. ಶಿಕ್ಷಣದಿಂದ ಸರ್ವಾಂಗೀಣ ಪ್ರಗತಿಗೆ ಸುಲಭ ದಾರಿ ದೊರಕುತ್ತದೆ. ಹೊಸ ಹೊಸ ಆವಿಷ್ಕಾರಗಳನ್ನು ಅರಿತುಕೊಳ್ಳಲು ಶಿಕ್ಷಣ ಅತ್ಯಗತ್ಯವಾಗಿದೆ. ಸ್ವಯಂ ಉದ್ಯೋಗದ ಕಡೆಗೆ ಒಲವು ಬೆಳೆಸಿ ದೇಶದ ಪ್ರಗತಿಗೆ ಕೈಜೋಡಿಸಲು ಶಿಕ್ಷಣ ಸಂಸ್ಥೆಗಳ ಪಾತ್ರ ಪ್ರಮುಖವಾಗಿದೆ. ಸ್ವಾವಲಂಬಿ ಬದುಕು ಮತ್ತು ಸದೃಢ ಭಾರತ ನಿರ್ಮಾಣದ ದಿಸೆಯಲ್ಲಿ ಯುವ ಸಮುದಾಯವನ್ನು ಕೊಂಡೊಯ್ಯಲು ಉನ್ನತ ಶಿಕ್ಷಣ ಅತ್ಯಗತ್ಯವಾಗಿದೆ ಎಂದರು.

ವಿದ್ಯಾರ್ಥಿಗಳು ಹಾಗೂ ಪಾಲಕರಿಗೆ ಇದೊಂದು ಖುಷಿಯ ಮತ್ತು ಭಾವನಾತ್ಮಕ ದಿನವಾಗಿದೆ. ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಚನ್ನಮ್ಮನ ಹೆಸರಿನ ರಾಣಿ ಚನ್ನಮ್ಮ ವಿವಿಗೆ ಚನ್ನಮ್ಮನ ಹೋರಾಟವು ಪ್ರೇರಣಾ ಶಕ್ತಿಯಾಗಲಿ. ಝಾನ್ಸಿ ರಾಣಿ ಲಕ್ಷ್ಮೀಬಾಯಿಯ ಕರ್ಮಭೂಮಿ ನೋಡಿದ್ದ ನನಗೆ ರಾಣಿ ಚನ್ನಮ್ಮ ಕರ್ಮಭೂಮಿಗೆ ಭೇಟಿ ನೀಡಿದ ಬಳಿಕ ಧನ್ಯತಾಭಾವ ಮೂಡಿತು. ಸ್ವಾತಂತ್ರ್ಯ ರಕ್ಷಣೆಗಾಗಿ ಮಹಾತ್ಮರ ತ್ಯಾಗ ನಮಗೆಲ್ಲಾ ಪ್ರೇರಣೆ ಎಂದರು.

ರಾಜ್ಯ ಸರ್ಕಾರ ನೀಡಿರುವ 127 ಎಕರೆ ಪ್ರದೇಶದಲ್ಲಿ ಆರ್‌ಸಿಯು ನೂತನ ಕ್ಯಾಂಪಸ್ ಶೀಘ್ರ ನಿರ್ಮಿಸುವ ಮೂಲಕ ಎಲ್ಲ ಸೌಕರ್ಯಗಳು ವಿದ್ಯಾರ್ಥಿಗಳಿಗೆ ಲಭಿಸಲಿ ಎಂದು ಘನ ರಾಜ್ಯಪಾಲ ಗೆಹ್ಲೋಟ್ ಆಶಿಸಿದರು.

ಕುಲಪತಿ ಪ್ರೊ.ಎಂ. ರಾಮಚಂದ್ರಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಲಸಚಿವ ಪ್ರೊ.ಬಸವರಾಜ ಪದ್ಮಶಾಲಿ ಪರಿಚಯಿಸಿದರು. ಮೌಲ್ಯಮಾಪನ ಕುಲಸಚಿವ ಪ್ರೊ.ವೀರನಗೌಡ ಪಾಟೀಲ, ಹಣಕಾಸು ಅಧಿಕಾರಿ ಪ್ರೊ.ಡಿ.ಎನ್.ಪಾಟೀಲ, ವಿದ್ಯಾ ವಿಷಯಕ ಪರಿಷತ್ ಸದಸ್ಯರು, ಸಿಂಡಿಕೇಟ್ ಸದಸ್ಯರು, ಬೋಧಕ–ಬೋಧಕೇತರ ಸಿಬ್ಬಂದಿ, ಸಂಶೋಧಕರು, ವಿದ್ಯಾರ್ಥಿಗಳು ಹಾಗೂ ಪಾಲಕರು ಭಾಗವಹಿಸಿದ್ದರು.

## ಭವಿಷ್ಯದ ಸವಾಲು ಎದುರಿಸಲು ಕರೆ

**ಸುವರ್ಣ ವಿಧಾನಸೌಧ:** ಜ್ಞಾನವನ್ನು ಸೃಷ್ಟಿಸುವುದರ ಜೊತೆಗೆ ಮನುಕುಲದ ಭವಿಷ್ಯದ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಯುವ ಸಮುದಾಯವನ್ನು ಅಣಿಗೊಳಿಸುವುದು ಉನ್ನತ ಶಿಕ್ಷಣದ ಉದ್ದೇಶವಾಗಿದೆ ಎಂದು ನವದೆಹಲಿಯ ಅಂತರ್ ರಾಷ್ಟ್ರೀಯ ಜೆನೆಟಿಕ್ ಎಂಜಿನಿಯರಿಂಗ್ ಮತ್ತು ಬಯೋಟೆಕ್ನಾಲಜಿ ಕೇಂದ್ರದ ನಿರ್ದೇಶಕ ನ್ಯಾಕ್ ಕಾರ್ಯಕಾರಿ ಸಮಿತಿಯ ಚೇರಮನ್ ಪ್ರೊ.ವಿ.ಎಸ್. ಚೌಹಾನ್ ಹೇಳಿದರು.

ವಿವಿಯ ಘಟಿಕೋತ್ಸವದ ಭಾಷಣದ ಸಂದರ್ಭದಲ್ಲಿ ಅವರು ಮಾತನಾಡಿ, ಪ್ರಸ್ತುತ ದೇಶದಲ್ಲಿ 960ಕ್ಕೂ ಅಧಿಕ ವಿಶ್ವವಿದ್ಯಾಲಯ, 45 ಸಾವಿರ ಕಾಲೇಜುಗಳಲ್ಲಿ 3.7 ಕೋಟಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಭಾರತೀಯ ಶಿಕ್ಷಣ ಪದ್ಧತಿಯು ಪ್ರಜಾಪ್ರಭುತ್ವದ ಬೇರುಗಳನ್ನು ಗಟ್ಟಿಗೊಳಿಸಿದೆ ಎಂದರು.

ಇಷ್ಟೆಲ್ಲಾ ಆದರೂ ಸಮಾಜದಲ್ಲಿ ಹಲವಾರು ಕಂದಕಗಳಿವೆ. ಶ್ರೀಮಂತರು–ಬಡವರ ನಡುವಿನ ಅಂತರ ಹೆಚ್ಚಿದೆ. ಎರಡು ವರ್ಷಗಳಲ್ಲಿ ಕೋವಿಡ್ ವೈರಸ್‌ನಿಂದ ಹತ್ತಾರು ಬದಲಾವಣೆಗಳಾಗಿವೆ. ಪ್ರತಿ ಹತ್ತು ವರ್ಷಗಳ ಅವಧಿಯಲ್ಲಿ ಒಂದೊಂದು ಬಗೆಯ ಸಾಂಕ್ರಾಮಿಕಗಳು ಕಾಣಿಸಿಕೊಳ್ಳುತ್ತಿವೆ. ಆರೋಗ್ಯ, ಶಿಕ್ಷಣ ಮತ್ತು ಆರ್ಥಿಕ ಸ್ಥಿತಿಗತಿಗಳ ಮೇಲೆ ಇದರ ಪರಿಣಾಮವನ್ನು ಅರಿತುಕೊಳ್ಳಲು ವರ್ಷಗಟ್ಟಲೇ ಬೇಕಾಗುತ್ತಿದೆ. ಕಡಿಮೆ ಅವಧಿಯಲ್ಲಿ ಆರ್‌ಸಿಯು ಅಪೂರ್ವ ಸಾಧನೆ ಮಾಡಿದೆ. ಹೊಸ ಕ್ಯಾಂಪಸ್ ನಿರ್ಮಾಣ ಮತ್ತಷ್ಟು ಪ್ರಗತಿಗೆ ಪೂರಕವಾಗಲಿದೆ. ಉನ್ನತ ಶಿಕ್ಷಣ ಕ್ಷೇತ್ರವು ತನ್ನ ಜವಾಬ್ದಾರಿ ಅರಿತುಕೊಂಡು ಕೌಶಲ್ಯಾಧಾರಿತ ಶಿಕ್ಷಣ ಒದಗಿಸಬೇಕಿದೆ ಎಂದು ಪ್ರತಿಪಾದಿಸಿದರು.

## ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದ ಅಪರಂಜಿಗಳು.....


ಅಕ್ಷತಾ ಭಟ್
ವಾಣಿಜ್ಯ ವಿಷಯ – ಪದವಿ


ಸಾವಿತ್ರಿ ಹಿರೇಮಠ
ವಿಜ್ಞಾನ ವಿಷಯ – ಪದವಿ


ಸೌಮ್ಯ ಕುಂಬಾರ
ಎಂ.ಎ – ಕನ್ನಡ



ಶ್ವೇತಾ ಗುಲನ್ನವರ
ಎಂ.ಎ – ಸಮಾಜಶಾಸ್ತ್ರ



ಸಪ್ನಾ ಕಜೂರ
ಎಂಬಿಎ


ಜ್ಯೋತಿ ಚಾವನ
ಎಂ.ಎಸ್‌ಸಿ – ಗಣಿತ


ಗಾಯತ್ರಿ ಬಾಗೇವಾಡಿ
ಎಂ.ಎ – ಇಂಗ್ಲೀಷ್


ಸವಿತಾ ಪರಕನಟ್ಟಿ
ಎಂ.ಎ – ಸಮಾಜಶಾಸ್ತ್ರ


ಸುರೇಶ ಬಿದರಿ
ಎಂ.ಎ – ಕನ್ನಡ



ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದ ನಿಮಿತ್ತ ವಿದ್ಯುತ್ ದೀಪಗಳಿಂದ ಸಿಂಗಾರಗೊಂಡ ವಿವಿಯ ಮುಖ್ಯ ಕಟ್ಟಡದ ರಮಣೀಯ ದೃಶ್ಯ. (ಚಿತ್ರ: ಪರಶುರಾಮ ಜೋಗುರ)




ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ವತಿಯಿಂದ ಕಲಾರಕೊಪ್ಪ ಗ್ರಾಮದಲ್ಲಿ ಸ್ವಚ್ಛತೆ ಮತ್ತು ಸ್ವದೇಶಿ ವಸ್ತುಗಳ ಬಳಕೆ ಅಭಿಯಾನಕ್ಕೆ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಚಾಲನೆ ನೀಡಿದರು.

# ಸ್ವದೇಶಿ ವಸ್ತುಗಳ ಬಳಕೆ ಅಭಿಯಾನ

**ಕಲಾರಕೊಪ್ಪ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ವತಿಯಿಂದ ಕಲಾರಕೊಪ್ಪ ಗ್ರಾಮದಲ್ಲಿ ಸ್ವಚ್ಛತೆ ಮತ್ತು ಸ್ವದೇಶಿ ವಸ್ತುಗಳ ಬಳಕೆ ಅಭಿಯಾನವನ್ನು (26 ಮಾರ್ಚ್ 2022) ಶನಿವಾರ ಗ್ರಾಮದಲ್ಲಿ ಜರುಗಿತು. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಅವರು ಹಸಿರು ನಿಶಾನೆ ತೋರುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ರಾಜ್ಯಶಾಸ್ತ್ರ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳು, ಕಲಾರಕೊಪ್ಪ ಗ್ರಾಮದ ಸ್ಥಳೀಯರ ಸಹಕಾರದಿಂದ ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ಆವರಣವನ್ನು ಸ್ವಚ್ಛತೆ ಮಾಡಿ ನಂತರ ಕಲಾರಕೊಪ್ಪ ಗ್ರಾಮದ ಪ್ರಮುಖ ಬೀದಿಗಳಲ್ಲಿ ಅಭಿಯಾನದ ಮೆರವಣಿಗೆ ನಡೆಸಲಾಯಿತು. ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ಸಂಯೋಜಕ ಡಾ. ಪ್ರಕಾಶ ಕಟ್ಟಿಮನಿ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ವೈ. ಎಸ್. ಬಲವಂತಗೋಳ, ಪೀಠದ ಸಹಾಯಕ ಪ್ರಾಧ್ಯಾಪಕ ಡಾ. ಶಿವಲಿಂಗಯ್ಯ ಗೋಠೆ, ಮುಖ್ಯಶಿಕ್ಷಕ ಆನಂದಗೌಡ ಕಾದ್ರೊಳ್ಳಿ, ಕಲಾರಕೋಪ್ಪ ಗ್ರಾಮಸ್ಥರಾದ ರಾಜು ಪಾರಿಶ್ವಾಡ, ಚಂದ್ರಗೌಡ ನಾಯ್ಕರ, ರಾಜ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು.




ಆರ್‌ಸಿಯು ಶಿಕ್ಷಣ ವಿಭಾಗದಲ್ಲಿ ಜರುಗಿದ ಪರಿಚಯಾತ್ಮಕ ಕಾರ್ಯಕ್ರಮವನ್ನು ಪ್ರೊ. ಜೆ. ಮಂಜಣ್ಣ ಅವರು ಉದ್ಘಾಟಿಸಿದರು. ವಿಭಾಗದ ಮುಖ್ಯಸ್ಥ ಪ್ರೊ.ಎಸ್.ಸಿ. ಎರ್ರಿಸ್ವಾಮಿ, ಡಾ. ಅರವಿಂದ ಕರಿಬಸನಗೌಡ್ರ ಮತ್ತು ಡಾ.ಸುಷ್ಮಾ.ಆರ್ ಚಿತ್ರದಲ್ಲಿದ್ದಾರೆ.



ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆವರಣದಲ್ಲಿ ವಿವಿಯ ಹಾಸ್ಟೆಲ್ ವಿದ್ಯಾರ್ಥಿಗಳು ಪವರ್‌ಸ್ಟಾರ್ ಪುನೀತ್ ರಾಜಕುಮಾರ ಅವರ ಜನ್ಮದಿನವನ್ನು ಆಚರಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪುನೀತ್ ಅವರ ಭಾವಚಿತ್ರದ ಮುಂದೆ ದೀಪ ಬೆಳಗಿಸಿ, ಕೇಕ್ ಕತ್ತರಿಸಿದರು. ಪವರ್ ಸ್ಟಾರ್ ಪುನೀತ್ ರಾಜಕುಮಾರ ಅವರ ಕಲಾಸೇವೆ ಮತ್ತು ಸಾಮಾಜಿಕ ಸೇವಾಕಾರ್ಯಗಳನ್ನು ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸ್ಮರಿಸಿದರು.

# ಶಿಕ್ಷಣದ ಮೂಲಕ ಸಮಾಜದ ಅಭಿವೃದ್ಧಿ ಸಾಧ್ಯ

**ಅಶೋಕನಗರ:** ಮಕ್ಕಳು ಶಿಕ್ಷಣದ ಒಲವು ಬೆಳಸಿಕೊಳ್ಳಬೇಕು ಏಕೆಂದರೆ ಶಿಕ್ಷಣವು ಮಾನವನ ಜೀವನವನ್ನು ಉಜ್ವಲಗೊಳಿಸುವುದು. ಶಿಕ್ಷಣದ ಮೂಲಕ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಕುಲಪತಿ ಪ್ರೊ. ಎಂ ರಾಮಚಂದ್ರಗೌಡ ಹೇಳಿದರು.

ಆರ್‌ಸಿಯು ಸಮಾಜಕಾರ್ಯ ವಿಭಾಗವು ಖಾನಾಪುರ ತಾಲೂಕಿನ ಅಶೋಕನಗರ ಗ್ರಾಮದಲ್ಲಿ ಏರ್ಪಡಿಸಿದ ಸಮಾಜಕಾರ್ಯ ಗ್ರಾಮೀಣ ಶಿಬಿರ 2021–22ರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರೊ. ಆರ್.ಎನ್. ಮನಗೂಳಿ ಶಿಬಿರಾರ್ಥಿಗಳಿಗೆ ಸಮಾಜದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೊಲೀಸರ ಪಾತ್ರ ವಿಷಯದ ಕುರಿತಾಗಿ ವಿಶೇಷ ಉಪನ್ಯಾಸ ನೀಡಿದರು. ಫ್ಯಾಮಿಲಿ ಪ್ಲ್ಯಾನಿಂಗ್ ಅಸೋಸಿಯೇಶನ್ ಘಟಕ ಮುಖ್ಯಸ್ಥ ಗೋವಿಂದ ಕುಲಕರ್ಣಿ ಅವರು ಕುಟುಂಬ ಯೋಜನೆ ಮಹತ್ವ ಮತ್ತು ಉಪಯೋಗಗಳನ್ನು ತಿಳಿಸಿದರು.

ಡಾ. ಆರತಿ ಕುಲಕರ್ಣಿ ಕಿಶೋರಿಯರ ಆರೋಗ್ಯದ ಬಗ್ಗೆ ತಿಳಿಸಿದರು. ರೋಹಿತ ಕಲ್ರಾ ನೆಹರು ಯುವ ಕೇಂದ್ರದ ಕಾರ್ಯದ ಬಗ್ಗೆ ತಿಳಿಸಿದರು. ಆರ್. ಆರ್. ಮುತಾಲಿಕದೇಸಾಯಿ ಎನ್‌ವೈಕೆ ಕಾರ್ಯಗಳ ಉದ್ದೇಶ ತಿಳಿಸಿದರು. ಕೃಷ್ಣ ಗುಮಾಸ್ತೆ ಫ್ಯಾಮಿಲಿ ಅಸೋಸಿಯೇಶನ್ ಸೌಲಭ್ಯಗಳ ಕುರಿತು ವಿವರಿಸಿದರು.

ಆಪ್ತ ಸಮಾಲೋಚಕಿ ಡಾ.ದೇವತಾ ಗಸ್ತಿ, ಕಿರಣ.ಎಸ್, ವಿಭಾಗದ ಸಂಶೋಧನಾ ವಿದ್ಯಾರ್ಥಿಗಳು, ಮತ್ತು ಗ್ರಾಮಸ್ಥರು ಇದ್ದರು.




ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ ನೇತೃತ್ವದಲ್ಲಿ ಖಾನಾಪುರ ತಾಲೂಕಿನ ಅಶೋಕನಗರ ಗ್ರಾಮದಲ್ಲಿ ಜರುಗಿದ ಸಮಾಜಕಾರ್ಯ ಗ್ರಾಮೀಣ ಶಿಬಿರದಲ್ಲಿ ಕುಲಪತಿ ಪ್ರೊ.ಎಂ. ರಾಮಚಂದ್ರಗೌಡ ಮಾತನಾಡಿದರು.

# ಸಹ್ಯಾದ್ರಿಯಲ್ಲಿ ಮಾನವನ ಹಸ್ತಕ್ಷೇಪ ಅತಿಯಾಗಿದೆ

**ವಿದ್ಯಾಸಂಗಮ:** ದೇಶದ ಐದು ರಾಜ್ಯಗಳಿಗೆ ವ್ಯಾಪಿಸಿರುವ ಪಶ್ಚಿಮ ಘಟ್ಟಗಳಲ್ಲಿ ಕೈಗಾರಿಕೆ ಮತ್ತು ಕೃಷಿ ಕಾರಣಗಳಿಂದ ಮಾನವನ ಹಸ್ತಕ್ಷೇಪ್ತ ಹೆಚ್ಚಾಗಿದೆ ಎಂದು ಉದ್ಯಮಿ ಆನಂದ ಹಾವನ್ನವರ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುವೆಂಪು ಸಭಾಂಗಣದಲ್ಲಿ ಬುಧವಾರದಂದು (2 ಮಾರ್ಚ್ 2022) ಜರುಗಿದ ರಾಷ್ಟ್ರೀಯ ವಿಜ್ಞಾನ ದಿನದ ನಿಮಿತ್ತ ಜರುಗಿದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಪಶ್ಚಿಮ ಘಟ್ಟವು ವಿಶ್ವದಲ್ಲಿಯೇ ಅತ್ಯಂತ ಹೆಚ್ಚು ಜೀವ ವೈವಿಧ್ಯ ಸಂಕುಲವನ್ನು ಹೊಂದಿದೆ ಎಂದು ಖ್ಯಾತಿ ಪಡೆದಿದೆ. ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಪಶ್ಚಿಮಘಟ್ಟಗಳು ವ್ಯಾಪಿಸಿವೆ. ಪಶ್ಚಿಮ ಘಟ್ಟದ ಬಹುಭಾಗ ಕರ್ನಾಟಕದಲ್ಲೆ ಇರುವುದು ನಮ್ಮೆಲ್ಲರ ಭಾಗ್ಯವಾಗಿದೆ ಎಂದರು.

ಕೈಗಾರಿಕೆ ಮತ್ತು ಕೃಷಿ ಚಟುವಟಿಕೆಗಳು ನಿರಂತರವಾಗಿ ಪಶ್ಚಿಮ ಘಟ್ಟಗಳಲ್ಲಿ ಹೆಚ್ಚಾಗುತ್ತಿವೆ. ಈ ಕಾರಣದಿಂದ ಪ್ರಾಕೃತಿಕ ಅಸಮತೋಲನ ಎದುರಿಸ ಬೇಕಾಗುತ್ತದೆ. ಕರ್ನಾಟಕದ ವಾತಾವರಣ ಮತ್ತು ಹವಾಮಾನದ ಮೇಲೆ ಪಶ್ಚಿಮ ಘಟ್ಟಗಳು ಹೆಚ್ಚಿನ ಪ್ರಭಾವವನ್ನು ಬೀರುತ್ತವೆ. ಆ ಕಾರಣದಿಂದ ಕರ್ನಾಟಕವು ಪ್ರಾಕೃತಿಕ ಶ್ರೀಮಂತಿಕೆ ಹೊಂದಿದೆ. ಕರ್ನಾಟಕದಲ್ಲಿರುವ ಈ ನಿರ್ಮಲ ವಾತಾವರಣವು ವಿಶ್ವದ ಯಾವುದೇ ಭಾಗದಲ್ಲಿ ದೊರೆಯುವುದಿಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಮಾತನಾಡಿ, ಸುಸ್ತಿರ ಅಭಿವೃದ್ಧಿಗೆ ನಾವೆಲ್ಲರೂ ಆದತ್ಯೆ ನೀಡಬೇಕು. ವಿಜ್ಞಾನದಿಂದ ಮಾನವನ ಪ್ರಗತಿ, ಜಿವನ ಶೈಲಿ ಸುಧಾರಣೆ ಮತ್ತು ಆರೋಗ್ಯ ವೃದ್ಧಿಸಬೇಕು. ಆದರೆ ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ನೆರವಿನಿಂದ ಯುದ್ಧದ ಸಾಮಗ್ರಿಗಳನ್ನು ಉತ್ಪಾದಿಸಿ, ಜಗತ್ತಿನ ಎಲ್ಲೆಡೆ ಅಶಾಂತಿಗೆ ವಿಜ್ಞಾನ ಗುರಿಯಾಗಿರುವುದು ಬೇಸರದ ಸಂಗತಿ ಖೇದ ವ್ಯಕ್ತಪಡಿಸಿದರು.

ವಿಜ್ಞಾನ ನಿಖಾಯದ ಎಲ್ಲ ವಿಭಾಗಗಳ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಪ್ರತಿ ವಿಭಾಗದಿಂದ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬಹುಮಾನ ಕೂಡಾ ವಿತರಿಸಲಾಯಿತು.

ಪ್ರಿಯಾಂಕ ಪ್ರಾರ್ಥಿಸಿದರು. ಪ್ರೊ.ವಿ.ಎಸ್. ಶೀಗಿಹಳ್ಳಿ ಸ್ವಾಗತಿಸಿದರು. ಡಾ.ಎಂ.ಬಿ. ಶ್ರೀಧರ ಮತ್ತು ಡಾ. ಬಸವರಾಜ ಬಗಾಡೆ ಪರಿಚಯಿಸಿದರು. ಡಾ. ಮಲ್ಲಮ್ಮಾ ರೆಡ್ಡಿ ನಿರೂಪಿಸಿದರು. ಡಾ. ಕಿರಣ ಸವಣೂರ ವಂದಿಸಿದರು.




ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ನಿಖಾಯ ಆಯೋಜಿಸಿದ ರಾಷ್ಟ್ರೀಯ ವಿಜ್ಞಾನ ದಿನದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಮಾತನಾಡಿದರು.

# ಸ್ತ್ರೀ ಕುಟುಂಬದ ಶಕ್ತಿ: ಡಾ.ಅಂಜಲಿ ಜೋಶಿ

**ವಿದ್ಯಾಸಂಗಮ:** ಸಮಸ್ತ ಕುಟುಂಬ ಮತ್ತು ಪರಿವಾರದ ಪ್ರತಿಯೊಂದು ಕಾರ್ಯಗಳು ಗೃಹಿಣಿಯರ ನೇತೃತ್ವದಲ್ಲಿ ಜರಗುತ್ತವೆ. ಹಾಗಾಗೀ ಒಂದು ಕುಟುಂಬದ ಏಳ್ಗೆಯಲ್ಲಿ ಗೃಹಿಣಿಯರ ಪಾತ್ರ ಅನನ್ಯವಾಗಿದೆ. ಅದ್ದರಿಂದ ಸ್ತ್ರೀ ಕುಟುಂಬದ ಶಕ್ತಿಯಾಗಿರುತ್ತಾಳೆ ಎಂದು ಕೆಎಲ್‌ಇ ಪ್ರಭಾಕರ ಕೋರೆ ಅಸ್ಪತ್ರೆಯ ಒಬಿಜಿ ವಿಭಾಗದ ಹಿರಿಯ ವೈದ್ಯಕೀಯ ಅಧಿಕಾರಿ ಡಾ. ಅಂಜಲಿ ಜೋಶಿ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಹಿಳಾ ಸಬಲೀಕರಣ ಘಟಕದ ನೇತೃತ್ವದಲ್ಲಿ (23 ಫೆಬ್ರುವರಿ 2022) ರಂದು ಆರೋಗ್ಯ ಮತ್ತು ಪೌಷ್ಠಿಕತೆ ವಿಷಯದ ಕುರಿತಾಗಿ ಒಂದು ದಿನದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಮನೆಯ ಆಗುಹೋಗು ಮತ್ತು ಸದಸ್ಯರ ಕಾಳಜಿ ತೆಗೆದುಕೊಳ್ಳುವ ಮಹಿಳೆಯು ತನ್ನ ಆರೋಗ್ಯದ ಕುರಿತಾಗಿ ಕೂಡಾ ಕಾಳಜಿ ವಹಿಸುವ ಅವಶ್ಯಕತೆಯಿದೆ. ಆದ್ದರಿಂದ ಉತ್ತಮ ಪೌಷ್ಠಿಕಯುಕ್ತ ಆಹಾರ ಮತ್ತು ನಿಯಮಿತ ವ್ಯಾಯಾಮವು ಮಹಿಳೆಯ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ತುಂಬಾ ಉಪಯುಕ್ತಕಾರಿ ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾದ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ಚಂದ್ರಿಕಾ ಕೆ.ಬಿ ಮಾತನಾಡಿ, ಮಹಿಳೆ ಒಂದು ಕುಟುಂಬದ ಕೇಂದ್ರ ಬಿಂದು ಆಗಿರುತ್ತಾಳೆ. ಆಕೆ ಅಸ್ವಸ್ಥಗೊಂಡರೆ ಸಮಸ್ತ ಕುಟುಂಬ ನಷ್ಟ ಅನುಭವಿಸಬೇಕಾಗುತ್ತದೆ. ಆದ್ದರಿಂದ ಮಹಿಳೆ ಮನೆಯ ಜವಾಬ್ದಾರಿಗೆ ನೀಡಿದಷ್ಟು ಮಹತ್ವ ತನ್ನ ಆರೋಗ್ಯಕ್ಕೂ ಕೂಡ ನೀಡಬೇಕು ಎಂದರು.

ಡಾ. ದೇವತಾ ಗಸ್ತಿ, ಮಹಿಳಾ ಸಬಲೀಕರಣ ಘಟಕದ ಸದಸ್ಯರು ವಿದ್ಯಾರ್ಥಿನಿಯರು ಮತ್ತು ವಿವಿಯ ಮಹಿಳಾ ಸಿಬ್ಬಂದಿ ಹಾಜರಿದ್ದರು. ಯಾಸ್ಮಿನ್‌ಬೇಗಂ ನದಾಫ್ ಸ್ವಾಗತಿಸಿದರು, ಡಾ. ನಂದಿನ ದೇವರಮನಿ ಪರಿಚಯಿಸಿದರು. ರಾಜೇಶ್ವರಿ ಶಿಂತ್ರೆ ನಿರೂಪಿಸಿದರು. ಡಾ ಮಲ್ಲಮ್ಮಾ ರೆಡ್ಡಿ ವಂದಿಸಿದರು.



ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮಹಿಳಾ ಸಬಲೀಕರಣ ಘಟಕದ ನೇತೃತ್ವದಲ್ಲಿ ಜರುಗಿದ 'ಆರೋಗ್ಯ ಮತ್ತು ಪೌಷ್ಠಿಕತೆ' ವಿಷಯದ ' ಒಂದು ದಿನದ ಕಾರ್ಯಾಗಾರದಲ್ಲಿ ಡಾ.ಅಂಜಲಿ ಜೋಶಿ ಮಾತನಾಡಿದರು. ಪ್ರೊ. ವಿ.ಎಸ್. ಶೀಗಿಹಳ್ಳಿ ಮತ್ತು ಡಾ.ದೇವತಾ ಗಸ್ತಿ ಚಿತ್ರದಲ್ಲಿದ್ದಾರೆ.

ಮಾರ್ಗದರ್ಶಕರು: ಪ್ರೊ. ಕಮಲಾಕ್ಷಿ ಜಿ. ತಡಸದ, ಸಂಪಾದಕರು: ವಿದ್ಯಾಶ್ರೀ ಹಾಲಕೇರಿಮಠ, ಪೂಜಾ ಹೆಗಡೆ ಮತ್ತು ಅರುಣ ಹೊಸಮಠ. ಉಪಸಂಪಾದಕರು: ಪ್ರಥಮ ಮತ್ತು ದ್ವಿತೀಯ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿಗಳು ಆರ್.ಸಿ.ಯು ಬೆಳಗಾವಿ.
ಪ್ರಕಾಶನ ಮತ್ತು ಮುದ್ರಣ : ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಭೂತರಾಮನಹಟ್ಟಿ, ಬೆಳಗಾವಿ-591156. E-mail: dhwani@rcub.ac.in.